ಭಾವುಕರಾಗಿದ್ದರು. ಕಾಲ ಎಲ್ಲರನ್ನೂ ಮಾಗಿಸಿ ಬಿಡುತ್ತೆ ಅನ್ನೋದಕ್ಕೆ ರಫೀಕ್ ಒಳ್ಳೇ ಉದಾಹರಣೆ ಅನ್ನಿಸಿತು.

ವಿಷ್ಣು ಭಟ್ಟರ ಮನೆಗೆ ಬಂದಾಗ ಸಂಜೆ ಏಳು ಗಂಟೆ. ಐದಾರು ಮೆಟ್ಟಿಲು ಹತ್ತಿ ಮನೆಯ ಹೆಬ್ಬಾಗಿಲ ಮೂಲಕ ಒಳಕ್ಕೆ ಬಂದಾಗ ಎದುರಿಗೆ ಕಂಡಿದ್ದು ಪ್ರಾಣದೇವರ ಅದೇ ಹಳೆಯ ಸಣ್ಣ ಗುಡಿ. ಗರ್ಭ ಗುಡಿಯೊಳಗೆ ದೀಪ ಉರಿಯುತ್ತಿತ್ತು. ನಲವತ್ತು ವರ್ಷಗಳ ಹಿಂದೆ ಭಟ್ಟನ ಜತೆ ಇದೇ ಮನೆಗೆ ಬಂದಿದ್ದು ನೆನಪಾಯಿತು. ಅವನೇ ಮಂಗಳಾರತಿ ಮಾಡಿ ತೀರ್ಥ, ಪ್ರಸಾದ ಕೊಟ್ಟಿದ್ದೂ ನೆನಪಾಯಿತು. ಗುಡಿಯ ಎರಡೂ ಮಗ್ಗುಲುಗಳಲ್ಲಿ ಇದ್ದ ಮನೆಗಳು ಇರಲಿಲ್ಲ! ಗುಡಿಯ ಹಿಂದೆಯೇ ಇದ್ದ ಹೆಬ್ಬಲಸಿನ ಮರ ಈಗ ಹೆಮ್ಮರವಾಗಿ ಬೆಳೆದು ನಿಂತಿತ್ತು. ಕತ್ತಲಲ್ಲಿ ಮರವನ್ನೇ ನೋಡುತ್ತ ನಿಂತಿದ್ದಾಗ ನಾನು ವಿಷ್ಣು ಭಟ್ಟರ ಮಗ. ನನ್ನೆಸರು ಅನಂತಪದ್ಮನಾಭ ಎನ್ನುತ್ತ ನಲವತ್ತು ವರ್ಷ ವಯಸ್ಸಿನ ವ್ಯಕ್ತಿ ಬಂದು ಮೂವರಿಗೂ ಕೈಮುಗಿದ.



'ಕಳೆದ ತಿಂಗಳು ಅಮ್ಮನೂ ಹೋಗಿಬಿಟ್ಟರು' ಅಂತ ವಿಷಾದ ಭಾವದಲ್ಲಿ ಹೇಳಿ ನಾರ್ವೇಕರ್ ಅಂಕಲ್, ನೀವು ಬರೋ ವಿಷಯವನ್ನು ಮೊದಲೇ ಫೋನ್ ಮಾಡಿ ತಿಳಿಸಿದ್ದರು. ನೀವು ಬಂದದ್ದರಿಂದ ಸಂತೋಷವಾಯ್ತು...' ಅಂದ.

'ಬನ್ನಿ ಸಾರ್, ಮನೆಗೆ ಹೋಗೋಣ...' ಎನ್ನುತ್ತ ಗುಡಿಯ ಹಿಂದೆ ಇದ್ದ ಹೊಸಮನೆಗೆ ಕರೆದುಕೊಂಡು ಹೋದ. ಅಪ್ಪನಿಗೆ ಕ್ಯಾನ್ಸರ್ ಅಂತ ಗೊತ್ತಾದ ಮೇಲೂ ಹತ್ತು ವರ್ಷ ಬದುಕಿದ್ದರು. ಕೇರಳದ ಧನ್ವಂತರಿಯೊಬ್ಬರು ಔಷಧ ಕೊಡೋಕೆ ಅಂತ ಬಂದಿದ್ದರು. ಅವರು ನಿಮ್ಮನೆಯ ವಾಸ್ತು ಸರಿಯಿಲ್ಲ. ಪ್ರಾಣದೇವರ ಗುಡಿ ಅಕ್ಕಪಕ್ಕ ವಾಸದ ಮನೆಗಳು ಇರಬಾರದು. ಜೋಪಡಿಯಾದರೂ ಸರಿ ಅಲ್ಲಿಗೆ ಹೋಗಿ ವಾಸ ಮಾಡಿ ಒಳ್ಳೇದಾಗುತ್ತೆ ಅಂದರು. ಅಪ್ಪನಿಗೆ ಏನನ್ನಿಸಿತೋ, ತಡಮಾಡದೆ ಎರಡೂ ಮನೆಗಳನ್ನು ಕೆಡವಿಸಿದರು. ಆ ಮೇಲೆ ನಾನೇ ಈ ಮನೆ ಕಟ್ಟಿಸಿದೆ ಎಂದ. ಭಟ್ಟರಿಗೆ ಸಂತಾಪ ಸೂಚಿಸುವಂತೆ ಮೂವರೂ ಸ್ವಲ್ಪ ಹೊತ್ತು ಮೌನವಾಗಿ ಕೂತಿದ್ದರು. ಆಮೇಲೆ ನಾರ್ವೇಕರ್ ಹೊರಡೋಣ ಅಂದ. ಊಟ ಮಾಡಿಕೊಂಡು ಹೋಗುವಂತೆ ಭಟ್ಟರ ಮಗ ಒತ್ತಾಯಿಸಿದ. ಇನ್ನೊಮ್ಮೆ ಮಧ್ಯಾಹ್ನದ ಊಟಕ್ಕೆ ಬರ್ತೀವಿ ಎಂದು ಹೇಳಿ ಹೊರ ಬಂದರು.

*

ಕತ್ತಲಾಗುವುದರೊಳಗೆ ಉಡುಪಿ ತಲುಪಬೇಕು ಎಂದು ಎಷ್ಟೇ ಪ್ರಯತ್ನಿಸಿದರೂ ಆಗಲಿಲ್ಲ. ಆಗುಂಬೆ ಘಟ್ಟದಲ್ಲಿ ಎರಡು ಬಸ್ಸುಗಳು ಕೆಟ್ಟು ನಿಂತಿದ್ದರಿಂದ ತಡವಾಯಿತು. ಉಡುಪಿಗೆ ಬಂದಾಗ ಎಂಟಾಗಿತ್ತು. ಯಾವುದಾದರೂ ಲಾಡ್ಜ್‌ನಲ್ಲಿ ರಾತ್ರಿ ಕಳೆದು ನಾಳೆ ಬೆಳಿಗ್ಗೆ ದೇವರನ್ನು ಹುಡುಕೋಣ ಎಂದು ಸತ್ಯ ಹೇಳಿದ. ಉಡುಪಿ ಬದಲಾಗಿತ್ತು. ಹೆಂಚಿನ ಛಾವಣಿಯ ಹಳೆಯ ಕಟ್ಟಡಗಳ ಜಾಗದಲ್ಲಿ ಬಹುಮಹಡಿ ಕಟ್ಟಡಗಳು ಎದ್ದು ನಿಂತಿದ್ದವು!. ಹಳೆಯ ಉಡುಪಿಯೇ ಚೆನ್ನಾಗಿತ್ತು ಎಂದು ಅವನಿಗೆ ಅನ್ನಿಸಿತು.

'ನಮ್ಮ ಉಡುಪಿಗೆ ಮಾರ್ಡನ್ ಲುಕ್ ಬಂದಿರೋದು ಸರ್ಕಾರಗಳಿಂದಲ್ಲ. ನಮ್ಮವರು ಮುಂಬೈ, ಗಲ್ಫ್ ದೇಶಗಳಿಗೆ ಹೋಗಿ ದುಡಿದು ತಂದ ದುಡ್ಡಿನಲ್ಲಿ ಹೊಸ ಉಡುಪಿ ಕಟ್ಟಿದ್ದಾರೆ! ಎಂದು ಮುಂಬೈನಲ್ಲಿರೋ ಅವನ ಫ್ರೆಂಡೊಬ್ಬ ಆಗಾಗ ಹೆಮ್ಮೆಯಿಂದ ಹೇಳುತ್ತಿದ್ದುದು ನೆನಪಾಯಿತು. ಅಜ್ಜರಕಾಡಿನಲ್ಲಿ ಅವನ ಮಗನ ಮನೆ ಇದೆ ಎಂದು ಅವನು ಹೇಳಿದ್ದು ನೆನಪಾಯಿತು. ನನ್ನ ಮಗ ಮಂಗಳೂರು,ಉಡುಪಿ, ಕಾರವಾರಗಳಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡ್ತಾನೆ ಎಂದು ಹೇಳಿದ್ದ. ಅವನ ಫೋನ್ ನಂಬರು ಸತ್ಯನ ಮೊಬೈಲ್‌ನಲ್ಲಿತ್ತು. ನಾಳೆ ಬಿಡುವು ಮಾಡಿಕೊಂಡು ಅವನನ್ನು ಮಾತಾಡಿಸಬೇಕು. ಈಗ ಫೋನ್ ಮಾಡಿದರೆ ಹೋಟೆಲ್‌ಗೆ ಬರ್ತಾನೆ. ರಾತ್ರಿ ಅವನ ಗೆಸ್ಟ್ ಆಗುವುದು ಬೇಡ ಅನ್ನಿಸಿತು. ರೂಮಿನಲ್ಲೇ ಕೂತು ಮಾತನಾಡುತ್ತ ಬಿಯರ್ ಕುಡಿಯೋಣ ಎಂದು ಇಬ್ಬರೂ ನಿರ್ಧರಿಸಿದರು. ಕಾರು ಓಡಿಸಿ ಸುಸ್ತಾಗಿದೆ ಎಂದು ಚಿದಂಬರ ಊಟ ಮಾಡಿ ತನ್ನ ರೂಮಿಗೆ ಹೋಗಿ ಮಲಗಿಬಿಟ್ಟ.

*